# ಬೆಂಗಳೂರು ವಿಶ್ವವಿದ್ಯಾಲಯ

NAAC Accredited "A" GRADE

**ಕುಲಸಚಿವರು (ಮೌಲ್ಯಮಾಪನ) ರವರ ಕಛೇರಿ, ಪರೀಕ್ಷಾ ವಿಭಾಗ, ಜ್ಞಾನಭಾರತಿ, ಬೆಂಗಳೂರು 560 056**

ಸಂ: ಪವಿ–2/ಪಿ.ಹೆಚ್.ಡಿ/ವಾ.ಪ್ರ.ವರದಿ/2018

ದಿನಾಂಕ: 06.07.2018

## ಸುತ್ತೋಲೆ

ವಿಷಯ : ಪ್ರಗತಿ ವರದಿಗಳನ್ನು ನೀಡುವ ಬಗ್ಗೆ.

* * * * * * *

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಹಾಲಿ ಚಾಲ್ತಿಯಲ್ಲಿ ಇರುವ ಪಿ.ಹೆಚ್.ಡಿ ನಿಯಮಾವಳಿಗಳ ಪ್ರಕಾರ ಪಿ.ಹೆಚ್.ಡಿ ಗೆ ನೊಂದಣಿಯಾಗಿರುವ ಪ್ರತಿ ವಿದ್ಯಾರ್ಥಿಯು ತನ್ನ ಅರ್ಧ ವಾರ್ಷಿಕ ಪ್ರಗತಿ ವರದಿಗಳನ್ನು (Half Year Progress Reports) ಪ್ರತಿ ವರ್ಷ ಜನವರಿ 31 ಹಾಗೂ ಜುಲೈ 31ರ ಒಳಗೆ ನೀಡಲು ನಿರ್ದೇಶಿಸಲಾಗಿರುತ್ತದೆ. ಆದರೆ, ಹಲವಾರು ವಿಭಾಗಗಳಲ್ಲಿ ಅರ್ಧ ವಾರ್ಷಿಕ ಪ್ರಗತಿ ವರದಿಗಳನ್ನು ಪಿ.ಹೆಚ್.ಡಿ ವಿಭಾಗದಿಂದ ಡಾಕ್ಟರಲ್ ಸಮಿತಿಯ ಸಭೆಯ ದಿನಾಂಕವು ನಿಗದಿಯಾದ ಮೇಲೆ ಅಥವಾ ಡಾಕ್ಟರಲ್ ಸಮಿತಿಯ ಸಭೆಯ ಹಿಂದಿನ ಹಾಗೂ ಅದೇ ದಿನದಂದು ಪ್ರಗತಿಯ ವರದಿಗಳನ್ನು ಟೇಬಲ್ ಅಜೆಂಡಾ ಆಗಿ ನೀಡುತ್ತಿರುತ್ತಾರೆ. ಇದು ನಿಯಾಮವಳಿಗಳನ್ನು ಉಲ್ಲಂಘಿಸಿದಂತಾಗಿರುತ್ತದೆ. ಇದರಿಂದಾಗಿ ಡಾಕ್ಟರಲ್ ಸಮಿತಿಯ ಸಭೆಗಳನ್ನು ಸೂಕ್ತ ಸಮಯದಲ್ಲಿ ನಡೆಸಲು ಸಾಧ್ಯವಾಗಿರುವುದಿಲ್ಲ ಹಾಗೂ ಹೊಸ ಪಿ.ಹೆಚ್.ಡಿ ಅಧಿಸೂಚನೆಯನ್ನು ನಿಯಮಿತವಾಗಿ ನೀಡಲು ಸಾಧ್ಯವಾಗುತ್ತಿರುವುದಿಲ್ಲ. ಆದುದರಿಂದ, ಇನ್ನು ಮುಂದೆ ನಡೆಯಬೇಕಾಗಿರುವ ಡಾಕ್ಟರಲ್ ಸಮಿತಿಯ ಸಭೆಗಳು ಈ ರೀತಿ ಅಂದರೆ, ನಿಗದಿತ ದಿನಾಂಕದ ನಂತರ ಬಂದ ವರದಿ, ಸಭೆಯ ಹಿಂದಿನ ಹಾಗೂ ಅದೇ ದಿನದಂದು ಸಲ್ಲಿಸಿದ ಪ್ರಗತಿಯ ವರದಿಗಳನ್ನು ಟೇಬಲ್ ಅಜೆಂಡಾ ಆಗಿ ನೀಡಲಾಗುವ ಯಾವುದೇ ವರದಿಗಳನ್ನು ಮತ್ತು ಅಂತಿಮ ಸಾರಲೇಖವನ್ನು ಪರಿಗಣಿಸಲಾಗುವುದಿಲ್ಲ. (ಈ ವರದಿ ಹಾಗೂ ಅಂತಿಮ ಸಾರಲೇಖವನ್ನು (Final Synopsis) ಮುಂದಿನ ಸಮಿತಿಯಲ್ಲಿ ಮಂಡಿಸಲಾಗುವುದು.)

ಮೇಲ್ಕಂಡ ವಿಷಯಗಳನ್ನು ವಿಭಾಗಗಳ ಮುಖ್ಯಸ್ಥರ ಗಮನಕ್ಕೆ ತರುತ್ತಾ, ಪ್ರತಿ ವಿಭಾಗಗಳು ಪ್ರತಿ ವರ್ಷ ಜನವರಿ 31 ಹಾಗೂ ಜುಲೈ 31ರ ಒಳಗೆ ಅರ್ಧ ವಾರ್ಷಿಕ ಪ್ರಗತಿ ವರದಿಗಳನ್ನು ತಪ್ಪದೆ ನೀಡಲು ಈ ಮೂಲಕ ಸೂಚಿಸಲಾಗಿದೆ. ಯಾವುದೇ ವಿಭಾಗದವರು ಅರ್ಧ ವಾರ್ಷಿಕ ಪ್ರಗತಿ ವರದಿಗಳನ್ನು ಪ್ರತಿ ವರ್ಷ ಜನವರಿ 31 ಹಾಗೂ ಜುಲೈ 31ರ ಒಳಗೆ ನೀಡದಿದ್ದಲ್ಲಿ, ಅವರ ವಿಭಾಗದ ಡಾಕ್ಟರಲ್ ಸಮಿತಿಯ ಸಭೆಯನ್ನು ನಡೆಸಲು ಸಾಧ್ಯವಾಗುವುದಿಲ್ಲ ಎಂಬ ವಿಷಯವನ್ನು ಈ ಮೂಲಕ ಎಲ್ಲಾ ವಿಭಾಗಗಳ ಗಮನಕ್ಕೆ ತರಲಾಗಿದೆ.

3/7/18

ಕುಲಸಚಿವರು (ಮೌಲ್ಯಮಾಪನ)

ಗೆ,

ಮುಖ್ಯಸ್ಥರುಗಳು, ಬೆಂಗಳೂರು ವಿಶ್ವವಿದ್ಯಾಲಯದ ಎಲ್ಲಾ ವಿಭಾಗಗಳು, ಬೆಂ.ವಿ.ವಿ ಹಾಗೂ ಅಧೀನದಲ್ಲಿರುವ ಸಂಶೋಧನಾ ಕೇಂದ್ರಗಳು, ಬೆಂಗಳೂರು – ಈ ಸುತ್ತೋಲೆಯನ್ನು ತಮ್ಮ ವಿಭಾಗಗಳ ಪ್ರತಿ ಮಾರ್ಗದರ್ಶಕರ ಮತ್ತು ಸಂಶೋಧನಾ ವಿದ್ಯಾರ್ಥಿಗಳ ಗಮನಕ್ಕೆ ತರಲು ಸೂಚಿಸುತ್ತಾ, ಈ ಸುತ್ತೋಲೆಯನ್ನು ವಿಭಾಗದ ಪ್ರಕಟಣ ಫಲಕದಲ್ಲಿ ಪ್ರಕಟಿಸಲು ಕೋರಿದೆ.

ಪ್ರತಿ;

1. ಆಪ್ತ ಕಾರ್ಯಾಲಯ, ಕುಲಪತಿಗಳು/ಕುಲಸಚಿವರು/ಕುಲಸಚಿವರು (ಮೌ), ಆಪ್ತ ಸಹಾಯಕರು, ವಿತ್ತಾಧಿಕಾರಿಗಳು, ಬೆಂ.ವಿ.ವಿ.
2. ಕಛೇರಿ ಪ್ರತಿ.

Scanned by CamScanner